ಇಂದು ದಿಃ**20-12-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್.ಎನ್ ವಕೀಲರಿಂದ 3 ನೇ ಎದುರುದಾರರ ಪರಃ**

ನನಗೆ ಕನ್ನಡ ಓದಲು ಮಾತ್ರ ಬರುತ್ತದೆ, ಬರಯಲು ಬರುವುದಿಲ್ಲ. ನಮ್ಮ ಅರ್ಜಿಗೆ ವಕೀಲರಿಗೆ ನಾನೆ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಈಗ ಎರಡು ವರ್ಷಗಳ ಹಿಂದೆ ಅಪಘಾತ ಆಗಿರುತ್ತದೆ. ನನ್ನ ಗಂಡ ಟಿ.ವಿ.ಎಸ್ ಗಾಡಿಯ ಮೇಲೆ ಬೈಪಾಸ್ ದಿಂದ ಬರುತ್ತಿದ್ದನು. ಅಪಘಾತವನ್ನು ನಾನು ಸ್ವತಃ ನೋಡಿಲ್ಲ. ನನ್ನ ಮಗನ ಸ್ನೇಹಿತ ಅಪಘಾತದ ವಿಷಯ ತಿಳಿಸಿದನು. ಹನುಮಂತರಾಜ ಅಪಘಾತದ ಕುರಿತು ಮರುದಿನ ಪಿರ್ಯಾದಿಕೊಟ್ಟನು. ಎದುರುದಾರನ ಮೋಟರ್ ಸೈಕಲ್ ಮತ್ತು ನನ್ನ ಗಂಡನ ವಾಹನದ ನಡುವೆ ಮುಖಾಮುಖಿ ಡಿಕ್ಕಿಯಾಯಿತು ಎಂದರೆ ಸರಿಯಲ್ಲ, ಸಾಕ್ಷಿ 1 ನೇ ಎದುರುದಾರ ಬಂದು ಹೊಡೆದನು ಎಂದು ಹೇಳುತ್ತಾರೆ. ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಎರಡೂ ವಾಹನಗಳು ಮುಖಾಮುಖಿ ಡಿಕ್ಕಿಯಾದ ಕಾರಣ, ಅಪಘಾತ ಆಗಿದೆ ಎಂದರೆ ಸರಿಯಲ್ಲ. ಆ ಕಾರಣದಿಂದ ಎರಡೂ ವಾಹನಗಳು ಜಖಂ ಆಗಿವೆ ಎಂದರೆ ಸರಿಯಲ್ಲ. ಅಪಘಾತದ ನಂತರ ನನ್ನ ಗಂಡನನ್ನು ಹರಿಹರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು.

ನನ್ನ ಗಂಡ ಹೂವಿನ ವ್ಯಾಪಾರ ಮಾಡುತ್ತಿದ್ದ ಬಗ್ಗೆ ಮತ್ತು ಆತನ ತಿಂಗಳ ಆದಾಯ ರೂ.50 ಸಾವಿರ ಇದ್ದ ಬಗ್ಗೆ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಗಂಡನ ನಿಕರವಾದ ವಯಸ್ಸು ತೋರಿಸಲು ಆದಾರ್ ಕಾರ್ಡ್ ಹಾಜರುಪಡಿಸಿದ್ದೇನೆ. ಪಿ.ಎಂ ವರದಿಯಲ್ಲಿ ನನ್ನ ಗಂಡನ ವಯಸ್ಸು ಹೆಚ್ಚು ತೋರಿಸಲಾಗಿದೆ ಎಂದರೆ ಸರಿ. ನಾನು ಹಾಜರುಪಡಿಸಿದ ವಂಶ

ವೃಕ್ಷಪ್ರಮಾಣಪತ್ರದಲ್ಲಿ ನನ್ನ ಅತ್ತೆಯ ಹೆಸರು ಇಲ್ಲ ಎಂದರೆ ಸರಿ. ನನ್ನ ಗಂಡನ ತಪ್ಪಿನಿಂದಲೇ ಅಪಘಾತ ಆದ ಕಾರಣ, 3 ನೇ ಎದುರುದಾರರು ಯಾವುದೇ ಪರಿಹಾರಕೊಡಲು ಭಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಪರಿಹಾರಪಡೆಯುವ ಉದ್ದೇಶದಿಂದ ಪೋಲೀಸರ ಜೊತೆಗೆ ಶಾಮೀಲಾಗಿ ಸುಳ್ಳು ಪಿರ್ಯಾದಿಕೊಟ್ಟು, ಸುಳ್ಳು ಪೋಲೀಸ್ ದಾಖಲೆಗಳನ್ನು ಸೃಷ್ಠಿಸಿ, ಆ ಪ್ರಕಾರ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾವು ಮೃತನ ಅವಲಂಬಿತರು ಇರಲಿಲ್ಲ ಎಂದರೆ ಸರಿಯಲ್ಲ.

**1 ಮತ್ತು 2 ನೇ ಎದುರುದಾರರ ಪರ ವಕೀಲರು ಗೈರು ಹಾಜರು ಇದ್ದ ಕಾರಣ, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.